ದಿನಾಂಕ 29-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ 8 ನೇ ಪ್ರತಿವಾದಿ ಪರ ವಕೀಲರಿಂದ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ 1, 2, 4, 6, ಮತ್ತು 7 ರವರ ಪರ ಶ್ರೀ ಬಿ.ಬಿ. ವಕೀಲರಿಂದಃ**

ಪ್ಲಾಟ್ ನಂ.3, 4 ಮತ್ತು 5 ರ ಸ್ವತ್ತುಗಳಲ್ಲಿ ಪಾಲು ಕೇಳಿ ನಾನು ಈ ದಾವೆಯನ್ನು ಹೂಡಿದ್ದೇನೆ. ನಾನು ಈ ದಾವೆ ಸಲ್ಲಿಸುವ ಕಾಲಕ್ಕೆ ಪ್ಲಾಟ್ ನಂ. 3, 4 ಮತ್ತು 5 ಸ್ವತ್ತುಗಳನ್ನು 8 ನೇ ಪ್ರತಿವಾದಿಗೆ ದಾನ ಕೊಟ್ಟಿದ್ದಾರೆ ಎಂಬ ವಿಚಾರವನ್ನು ವಾದಪತ್ರದಲ್ಲಿ ಬರೆಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ದಾನಪತ್ರವನ್ನು ಸಾದಿಕ್ ಹುಸೇನ್, ಜಾವೀದ್ ಹುಸೇನ್ ಮತ್ತು ಅಲ್ತಾಫ್ ಹುಸೇನರವರು ಬರೆದುಕೊಂಡು ತಂದು ಹಾಜರುಡಿಪಸಿರುತ್ತಾರೆ. ಸದರಿ ದಾನಪತ್ರವನ್ನು 8 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ. ಸದರಿ ದಾನಪತ್ರವನ್ನು ದಿನಾಂಕ 01-06-2008 ರಂದು ಮಾಡಲಾಗಿರುತ್ತದೆ. ಸದರಿ ದಾನಪತ್ರ ಮಾಡಿದಾಗ ನಾನು ಮತ್ತು ನಮ್ಮ ಸಹೋದರರು ಹಾಗೂ ರಹೇಮಾನ್ ಪಟೇಲರವರು ಇದ್ದೆವು. ಸದರಿ ಸ್ವತ್ತುಗಳನ್ನು 8 ನೇ ಪ್ರತಿವಾದಿಯು ಗಳಿಸಿರುವುದರಿಂದ ಅವರಿಗೆ ದಾನಪತ್ರದ ಮುಖಾಂತರ ನೀಡಲಾಯಿತು. ಸದರಿ ದಾನಪತ್ರದಲ್ಲಿ ಯಾರು ಯಾರು ಸಹಿ ಮಾಡಿದ್ದಾರೆ ಮತ್ತು ಎಲ್ಲಿ ನೋಟರಿ ಮಾಡಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ದಾನಪತ್ರ ಮಾಡಲಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ

ದಿನಾಂಕ 29-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1, 2, 4, 6, ಮತ್ತು 7 ರವರ ಪರ ಶ್ರೀ ಬಿ.ಬಿ. ವಕೀಲರಿಂದಃ**

ದಾನಪತ್ರವನ್ನು ಶಮಶಾದ್ ಹುಸೇನ್, ಜಾವೀದ್ ಹುಸೇನ್, ಅಕ್ತರ್ ಹುಸೇನ್ ಮತ್ತು ಇಫ್ತಿಕಾರ್ ಹುಸೇನ ರವರು ದಾನಪತ್ರವನ್ನು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ. ಸದರಿ ನಾಲ್ಕು ಜನರು ಸದರಿ ದಾನಪತ್ರಕ್ಕೆ ಸಹಿ ಮಾಡಿರುತ್ತಾರೆ. ಸದರಿ ನಾಲ್ಕು ಜನರನ್ನು ಹೊರತುಪಡಿಸಿ ನಾನು ದಾನಪತ್ರಕ್ಕೆ ಸಹಿ ಮಾಡಿರುತ್ತೇನೆ. ನಾನು ಸದರಿ ಸಹಿಯನ್ನು ಮೇಲ್ಕಂಡ ನಾಲ್ಕು ಜನರ ಮನೆಯಲ್ಲಿ ಮಾಡಿರುತ್ತೇನೆ. ದಿನಾಂಕ 01-06-2008 ರಂದು ಸದರಿ ದಾನಪತ್ರವನ್ನು ಮಾಡಲಾಯಿತು. ಯಾವ ಕಾರಣದಿಂದ ಸದರಿ ದಾನಪತ್ರ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿಯವರ ಮನೆಯಲ್ಲಿ ಹೊರತುಪಡಿಸಿ ಸದರಿ ದಾಖಲೆಯ ವಿಚಾರವಾಗಿ ಬೇರೆ ಎಲ್ಲೂ ಸಹಿ ಮಾಡಿರುವುದಿಲ್ಲ. ಎಲ್ಲರೂ ಸಹ ಸದರಿ ದಾಖಲೆಗೆ ಮನೆಯಲ್ಲೇ ಸಹಿ ಮಾಡಿರುತ್ತಾರೆ.

ದಾವಾ ಆಸ್ತಿ-1 ಮತ್ತು 2 ನ್ನು ನಾನು ನೋಡಿರುತ್ತೇನೆ. ಪ್ಲಾಟ್ ನಂ.5 ರಲ್ಲಿ ಪರಶುರಾಮರವರು ಮನೆ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾನ ಮಾಡಿರುವ ಸ್ವತ್ತುಗಳ ನಂಬರ್ ಗಳು ನನಗೆ ಗೊತ್ತಿಲ್ಲ. ಪ್ಲಾಟ್ ನಂ.3 ಮತ್ತು 4 ರಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಸದರಿ ಸ್ವತ್ತಿನಲ್ಲಿ ಯಾರೂ ಸಹ ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯತ್ತಾರೆ. ದಾನಪತ್ರ ಮಾಡಲಾಗಿದ್ದ ಸದರಿ ದಾಖಲೆಯ ಸ್ವತ್ತುಗಳಲ್ಲಿ ಶಮಶಾದ್ ಹುಸೇನ್ ರವರು ಸ್ವಾಧೀನದಲ್ಲಿರುತ್ತಾರೆ. ಸದರಿ ಸ್ವತ್ತುಗಳನ್ನು ದಾನ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ